# ಸಮಾಜ ವಿಜ್ಞಾನ 8ನೇತರಗತಿ.

# ಅರ್ಥಶಾಸ್ತ್ರ

# ಅಧ್ಯಾಯ-4 ಬಡತನ ಮತ್ತು ಹಸಿವು.

**ಮೂಲಭೂತ ಅವಶ್ಯಕತೆಗಳು ಎಂದರೇನು** ?

ಊಟ,ಬಟ್ಟೆ,ವಸತಿ,ಶುದ್ಧ ನೀರು,ಆರೋಗ್ಯ ಸೌಲಭ್ಯಗಳು,ಶಿಕ್ಷಣ ಇವುಗಳನ್ನು ಮಾನವನ ಕನಿಷ್ಠ ಮೂಲಭೂತ ಅವಶ್ಯಕತೆಗಳು ಎನ್ನುವರು.

**ಬಡವರೆಂದರೆ ಯಾರು** ?

ಮಾನವನ ಬದುಕಿಗೆ ಅಗತ್ಯವಾದ ಊಟ,ಬಟ್ಟೆ,ವಸತಿ,ಶುದ್ಧ ನೀರು,ಆರೋಗ್ಯ ಸೌಲಭ್ಯಗಳು,ಶಿಕ್ಷಣ ಪಡೆಯಲಾಗದ ಪರಿಸ್ಥಿತಿಯೇ ಬಡತನ.



**ಬಡತನದ ಲಕ್ಷಣಗಳು;-** 1) ಹಸಿವು ಮತ್ತು ದಾರಿದ್ರ್ಯ.

2) ಸತತ ಅನಾರೋಗ್ಯ ಮತ್ತು ಶಿಕ್ಷಣದ ಕೊರತೆ.

3) ನಿರುದ್ಯೋಗ.

4) ಕಚ್ಚಾಮನೆಗಳಲ್ಲಿ ವಾಸ.


5) ಅಪೌಷ್ಠಿಕ ಆಹಾರ.

6) ತಲಾ ಆದಾಯ ಬಹಳಷ್ಟು ಕಡಿಮೆ.






**ಬಡತನದ ಸೂಚಕಗಳು ;–** 'ದಾದಾ ಬಾಯಿ ನವರೋಜಿ' ಬಡತನ ರೇಖೆ ಬಳಕೆಗೆ ತಂದರು.



**ಬಡತನ ರೇಖೆ ಎಂದರೇನು ?**

ಬಡವರನ್ನು ಬಡವರಲ್ಲದವರಿಂದ ಪ್ರತ್ಯೇಕಿಸಲು ಬಳಸುವ ರೇಖೆಯೇ ಬಡತನ ರೇಖೆ . ಬಡತನವನ್ನು ಮಾನವ ಬಳಸುವ ಆಹಾರದ ಅನುಭೋಗದ ಪ್ರಮಾಣವನ್ನು ಆಧರಿಸಿ ಗುರುತಿಸಲಾಗುತ್ತದೆ.

ನಗರ ಪ್ರದೇಶದ ವ್ಯಕ್ತಿಯ ಆಹಾರ ಕನಿಷ್ಠ 2100 ಕ್ಯಾಲರಿ ಗ್ರಾಮಿಣ ಪ್ರದೇಶದ ವ್ಯಕ್ತಿಯ ಆಹಾರ 2400 ಕ್ಯಾಲರಿ.

| Dish | Amount | Fat (gms) | Cholesterol (mgs) | Calories (kcals) |
|---|---|---|---|---|
| Paratha | 1 (6") | 11 | 0 | 180 |
| Puri | 1 (4") | 5 | 0 | 150 |
| Roti | 1 (6") | 0.5 | 0 | 85 |
| Misi Roti | 1 (6") | 1 | 0 | 90 |
| Daal (Urad) with tarka | 150gms | 6 | 0 | 154 |
| Daal (Urad) without tarka | 150gms | 0.5 | 0 | 104 |
| Rajma / Chana / Lobia | 150gms | 5 | 0 | 153 |
| Dahi / Curd | 150gms | 3 | 14 | 90 |
| Lassi (salty) | 200ml | 6 | 3 | 90 |
| Lassi (sweet) | 200ml | 6 | 4 | 150 |
| Vegetable | 150gms | 8 | 0 | 142 |
| Mixed Vegetable | 150gms | 21 | 0 | 298 |
| Chicken Tikka | 6 pieces | 20 | 85 | 273 |
| Chicken Curry | 150gms | 36 | 85 | 485 |
| Kebabs (sheekh) | 4 pieces | 20 | 100 | 308 |
| Meat Curry | 150gms | 35 | 135 | 485 |
| Halwa | 100gms | 15 | 0 | 331 |
| Gulabjamun | 2 medium | 15 | 31 | 280 |

**ಬಡತನ ಹೇಗೆ ನಿವಾರಣೆ ಮಾಡಬಹುದು** ?

ಕನಿಷ್ಠ ಅವಶ್ಯಕತೆಗಳೇ ಅಲ್ಲದೇ ಸಮುದಾಯದ ಜೀವನದಲ್ಲಿ ವ್ಯಕ್ತಿಗೆ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತಿರ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುವ ಸ್ವಾತಂತ್ರ್ಯ ವಿರಬೇಕು. ಬಡವರ ಜೀವನದಲ್ಲಿ ಈ ರೀತಿಯ ಸುಧಾರಣೆಗಳಾದಾಗ ಬಡತನ ನಿವಾರಣೆ ಯಾಗಬಹುದು.

**ಬಡತನ ಗುರುತಿಸುವ ಅಂಶಗಳು ;-**



1) ಆದಾಯ ಮತ್ತು ಅನುಭೋಗ.
2) ಅನಕ್ಷರತೆಯ ಮಟ್ಟ.

3) ಅಪೌಷ್ಠಿಕತೆಯ ಪ್ರಮಾಣ.
4) ಅರೋಗ್ಯ ಸುರಕ್ಷತೆಯ ಕೊರತೆ.
5) ಉದ್ಯೋಗಾವಕಾಶಗಳ ಕೊರತೆ.
6) ನೈರ್ಮಲ್ಯದ ಕೊರತೆ.
7) ಸಾಮಾಜಿಕ ಬಹಿಷ್ಕಾರ ಮತ್ತು ಅಶಕ್ತತೆ.
8) ವಿಶ್ವ ಬ್ಯಾಂಕ್ ವರದಿಯ ಪ್ರಕಾರ ;- ದಿನ ಒಂದಕ್ಕೆ ಅನುಭೋಗಿಗೆ 1.25 ಡಾಲರ್ ಗಿಂತ ಕಡಿಮೆ ವೆಚ್ಚಮಾಡುವವರು ಬಡತನ ರೇಖೆಗಿಂತ ಕೆಳಗಿರುವವರು ಎಂದು ಗುರುತಿಸಲಾಗಿದೆ.

**<u>ಹಸಿವು ಮತ್ತು ಕ್ಷಾಮ</u>** ;- ಬಡತನದ ಬಹು ಮುಖ್ಯ ಲಕ್ಷಣ ವೆಂದರೆ ಹಸಿವು ಮತ್ತು ದಾರಿದ್ರ್ಯ. ಬಡತನದ ಕುಟುಂಬಗಳಿಗೆ ಆಹಾರ ಪದಾರ್ಥಗಳು ಸುಲಭವಾಗಿ ಮತ್ತು ಸಮರ್ಪಕವಾಗಿ ದೊರೆಯುತ್ತಿಲ್ಲ. ಏಕೆಂದರೆ ಅವುಗಳನ್ನು ಕೊಳ್ಳುವ ಶಕ್ತಿ ಇಲ್ಲದೇ ಇರುವುದರಿಂದ ಇವರು ಆಹಾರದ ಅಭದ್ರತೆಯನ್ನು ಎದುರಿಸುತ್ತಿರುತ್ತಾರೆ.



**<u>ಹಸಿವಿನ ಪರಿಣಾಮಗಳು;-</u>**

1) ಅಪೌಷ್ಠಿಕತೆ.
2) ಮಕ್ಕಳಲ್ಲಿ ಕಡಿಮೆ ತೂಕ.
3) ಮಕ್ಕಳ ಮರಣ ಪ್ರಮಾಣ ಅಧಿಕ.
4) ರಕ್ತ ಹೀನತೆ.

**<u>ಹಸಿವಿನ ನಿವಾರಣೆಗೆ ಕೈಗೊಂಡ ಕ್ರಮಗಳು;-</u>**

1) ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ.
2) ಹೈನುಗಾರಿಕೆಯಲ್ಲಿ ಸ್ವಾವಲಂಬನೆ.
3) ಹಣ್ಣು ಮತ್ತು ತರಕಾರಿಯಲ್ಲಿ ಸ್ವಾವಲಂಬನೆ.

4) ಹಸಿರು ಕ್ರಾಂತಿ ಮತ್ತು ನೀಲಿ ಕ್ರಾಂತಿಯ ಮೂಲಕ ಈ ಮೇಲಿನ ಕಾರ್ಯಗಳನ್ನು ಪೂರೈಸಬಹುದು.



**ಕ್ಷಾಮ ಎಂದರೇನು ?**
ಆಹಾರದ ಕೊರತೆಯಿಂದ ಹೊಟ್ಟೆಗಿಲ್ಲದೆ ಮತ್ತು ಕಲುಷಿತ ನೀರಿನ ಸೇವನೆಯಿಂದ ಉಂಟಾಗುವ ಸೋಂಕಿಗೆ ಒಳಗಾಗಿ ಜನರು ವ್ಯಾಪಕವಾಗಿ ಸಾಯುವುದನ್ನು ಕ್ಷಾಮ ಎಂದು ಕರೆಯಲಾಗುತ್ತದೆ.




**ಆಹಾರ ಭದ್ರತೆ ಮತ್ತು ಬಡತನ ನಿರ್ಮೂಲನೆ ;-**

**ಆಹಾರ ಭದ್ರತೆ ಎಂದರೇನು ?**

ದೇಶದಲ್ಲಿರುವ ಎಲ್ಲಾ ಜನರಿಗೆ ಸಮರ್ಪಕವಾದ ಆಹಾರವನ್ನು ಸದಾಕಾಲ ದೊರಕಿಸಿಕೊಡುವ ಖಾತರಿನೀಡುವ ವ್ಯವಸ್ಥೆಗೆ ಆಹಾರ ಭದ್ರತೆ ಎನ್ನುವರು. ಆಹಾರ ಭದ್ರತೆಯು ಈ ಕೆಳಗಿನ ಭರವಸೆಯನ್ನು ಒದಗಿಸುತ್ತದೆ.

1) ದೇಶದಲ್ಲಿರುವ ಎಲ್ಲಾ ಜನರಿಗೆ ಸಾಕಷ್ಟು ಆಹಾರ ದೊರಕಿಸಿಕೊಡುವುದು.
2) ಎಲ್ಲಾ ಜನರಿಗೂ ಗುಣಮಟ್ಟದ ಆಹಾರವನ್ನು ಕೊಲ್ಲುವ ಸಾಮರ್ಥ್ಯ ಹೆಚ್ಚಿಸುವುದು.
3) ಬಡವರು ಆಹಾರವನ್ನು ಪಡೆಯಲು ಇರುವ ಅಡೆತಡೆಗಳನ್ನು ನಿವಾರಿಸುವುದು.

**ಆಹಾರ ಭದ್ರತಾ ವ್ಯವಸ್ಥೆಯ 2 ಘಟಕಗಳೆಂದರೆ 1) ಕಾಪು ದಾಸ್ತಾನು. 2)ಸಾರ್ವಜನಿಕ ವಿತರಣಾ ವ್ಯವಸ್ಥೆ.**



1) **ಕಾಪು ದಾಸ್ತಾನು;–** ಸರ್ಕಾರವು ರೈತರಿಂದ ಸುಗ್ಗಿಯ ಕಾಲದಲ್ಲಿ ಹೆಚ್ಚುವರಿ ಆಹಾರ ಧಾನ್ಯಗಳನ್ನು ಭಾರತೀಯ ಆಹಾರ ನಿಗಮದ ಮೂಲಕ ಕೊಂಡು ಸಂಗ್ರಹಿಸುವುದನ್ನು ಕಾಪು ದಾಸ್ತಾನು ಎನ್ನುವರು.

2)**ಸಾರ್ವಜನಿಕ ವಿತರಣಾ ವ್ಯವಸ್ಥೆ;–** ಭಾರತೀಯ ಆಹಾರ ನಿಗಮವು ಸಂಗ್ರಹಿಸಿದ ಆಹಾರ ಧಾನ್ಯಗಳನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ಸಮಾಜದ ಬಡವರ್ಗಗಳ ಜನರಿಗೆ ಕಡಿಮೆ ಬೆಲೆಯಲ್ಲಿ ವಿತರಿಸುವುದನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆ ಎನ್ನುವರು.

ಪ್ರಸ್ತುತ ಭಾರತದಲ್ಲಿ ಸುಮಾರು 4.7 ಲಕ್ಷ ನ್ಯಾಯಬೆಲೆ ಅಂಗಡಿಗಳಿದ್ದು,ಸುಮಾರು 16 ಕೋಟಿ ಕುಟುಂಬಗಳು ಈ ಸೌಲಭ್ಯವನ್ನು ಪಡೆಯುತ್ತಿವೆ.


ಸರ್ಕಾರವು ಬಡಕುಟುಂಬಗಳನ್ನು ಗುರುತಿಸಿ ಬಿಪಿಎಲ್ ಕಾರ್ಡುಗಳನ್ನು ( ಪಡಿತರ ಚೀಟಿ)ವಿತರಿಸಿದೆ.

ಆಹಾರ ಭದ್ರತಾ ವ್ಯವಸ್ಥೆ ಅಡಿಯಲ್ಲಿ ಸರ್ಕಾರವು ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ ಯನ್ನು ಜಾರಿಗೆ ತಂದಿದೆ. ಶಾಲೆಗಳಲ್ಲಿ ಮದ್ಯಾಹ್ನದ ಊಟಯೋಜನೆಯನ್ನು ಜಾರಿಗೆತಂದಿದೆ.









BPL CARD
(AS PER SURVEY - 2002)
ORISSA STATE

Card No. : OR-2401001/265

| | |
|---|---|
| Name of the Head of the Family ପରିବାର ମୁଖ୍ୟଙ୍କ ନାମ | : BHASKAR BHOI |
| Election Commissioner Photo Identity Card No. ନିର୍ବାଚନ ଅଧିକାରୀଙ୍କ ଫଟୋ ପରିଚୟ ନଂ. | : Ic01932 |
| 1997 DRDA BPL Sl.No. NAC/Muncipality BPL Sl.No. | : – |
| Category (a. SC/ST/OBC b. PH/OAP c. SF/MF) ଶ୍ରେଣୀ | : SC |
| Address ଠିକଣା | : BAGBIRA SENHAPALI |
| Village ଗ୍ରାମ | : BAGBIRA SENHAPALI |
| P.O. ପୋଷ୍ଟ ଅଫିସ | : BAGBIRA SENHAPALI |
| Block ବ୍ଲକ | : CUTTACK SADAR |
| Occupational Details ପେଶାଗତ ବିବରଣୀ | : FARMER |
| District ଜିଲ୍ଲା | : CUTTACK |
| House No./Holding No./Plot No. ଘର ନଂ/ ହୋଲ୍ଡିଂ ନଂ/ ପ୍ଲଟ ନଂ | : 310 |

Date of Issue 20/05/2009 — Valid Till 19/05/2013

Signature of Cardholder — Authorized Signature

SAMPLE

<u>**ಬಡತನ ನಿರ್ಮೂಲನೆ;-**</u> ಬಡತನ ನಿರ್ಮೂಲನೆಗೆ ಸರ್ಕಾರದ ಕ್ರಮಗಳನ್ನು 4 ವರ್ಗಗಳಾಗಿ ವಿಂಡಿಸ ಬಹುದು. ಅವುಗಳೆಂದರೆ,

1) **ಆರ್ಥಿಕ ಅಭಿವೃದ್ಧಿ ಕ್ರಮಗಳು;-** ಸರ್ಕಾಋವು ಪಂಚವಾರ್ಷಿಕ ಯೋಜನೆಗಳ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಮತ್ತು ಅಭಿವೃದ್ಧಿಯ ಫಲ ಎಲ್ಲಾ ವರ್ಗದವರಿಗೂ ದೊರಕುವಂತೆ ನೋಡಿಕೊಳ್ಳುತ್ತಿದೆ.

**2) ನಿರ್ಧಿಷ್ಠ ಬಡತನ ನಿರ್ಮೂಲನಾ ಕಾರ್ಯಕ್ರಮಗಳು ಜಾರಿ;–** ಅವುಗಳನ್ನು 2 ಗುಂಪುಗಳಾಗಿ ವಿಂಗಡಿಸ ಬಹುದು. ಅವುಗಳೆಂದರೆ;

**ಎ) ಸ್ವ ಉದ್ಯೋಗ ಕಾರ್ಯಕ್ರಮ ;–** ಬಡಜನರು ಮತ್ತು ವಿದ್ಯಾವಂತ ನಿರುದ್ಯೋಗಿಗಳನ್ನು ಗುರುತಿಸಿ,ಅವರಿಗೆ ಅಗತ್ಯವಿರುವ ಸಾಲವನ್ನು ಒಸದಗಿಸಿ,ಸ್ವಂತ ಉದ್ಯೋಗವನ್ನು ಕೈಗೊಲ್ಲುವಂತೆ ಮಾಡಲು ಹಲವಾರು ಸ್ವ ಉದ್ಯೋಗ ಕಾರ್ಯಕ್ರಮ ಗಳನ್ನು ಜಾರಿಗೊಳಿಸಿದೆ.







**1)** ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ (1980)

**2)** ಸ್ವರ್ಣಜಯಂತಿ ಗ್ರಾಮ ಸ್ವ ಉದ್ಯೋಗ ಯೋಜನೆ (1999)

**ಬಿ) ಕೂಲಿ ಉದ್ಯೋಗ ಕಾರ್ಯಕ್ರಮಗಳು;–** ಗ್ರಾಮೀಣ ಭಾಗದಲ್ಲಿ ಕೆರೆ–ಕಟ್ಟೆಗಳು, ರಸ್ತೆಗಳು,ಶಾಲೆ,ಆಸ್ಪತ್ರೆ ಮುಂತಾದ ಸಮುದಾಯ ಆಸ್ತಿಗಳನ್ನು ನಿರ್ಮಿಸುವ ಮೂಲಕ ಇವರಿಗೆ ಕೂಲಿ ಉದ್ಯೋಗ ಒದಗಿಸುವುದು.



**ಸಿ) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ(2006) ;–** ಪ್ರತಿ ಬಡಕುಟುಂಬದ ಇಚ್ಛೆಯುಳ್ಳ ಕೆಲಸಗಾರರಿಗೆ ವರ್ಷದಲ್ಲಿ ಕನಿಷ್ಠ 100 ದಿನಗಳ ಕೂಲಿ ಕೆಲಸವನ್ನು ಒದಗಿಸುವ ಮೂಲಕ ಅವರ ಜೀವನ ಭದ್ರತೆಯನ್ನು ಒದಗಿಸುತ್ತಿದೆ.



**3) ಕನಿಷ್ಠ ಮೂಲ ಅವಶ್ಯಕತೆಗಳ ಪೂರೈಕೆ ;–**

1) ನ್ಯಾಯ ಬೆಲೆ ಅಂಗಡಿಗಳ ಮೂಲಕ ಬಡಜನರಿಗೆ ಕಡಿಮೆ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ವಿತರಿಸುತ್ತಿದೆ.
2) ಯಶಸ್ವಿನಿ ಯೋಜನೆಯ ಮೂಲಕ ಬಡಜನರಿಗೆ ಆರೋಗ್ಯ ವಿಮಾ ಸೌಲಭ್ಯವನ್ನು ಒದಗಿಸುತ್ತಿದೆ.




3) ಇಂದಿರಾ ಆವಾಜ್ ಮತ್ತು ವಾಲ್ಮೀಕಿ–ಅಂಬೇಡ್ಕರ್ ಆವಾಜ್ ಯೋಜನೆ ಮೂಲಕ ಬಡಜನರಿಗೆ ಮನೆಗಳನ್ನು ನಿರ್ಮಿಸಿಕೊಡುತ್ತದೆ.



4) ನಿರ್ಮಲ ಗ್ರಾಮ ಯೋಜನೆ ಅಡಿಯಲ್ಲಿ ಶೌಚಾಲಯಗಳನ್ನು ನಿರ್ಮಿಸಿಕೊಡುತ್ತದೆ.

5) ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ ಜಾರಿಗೊಳಿಸಲಾಗಿದೆ.




**4) <u>ಸಾಮಾಜಿಕಾ ಭದ್ರತಾ ಕ್ರಮಗಳು</u>** ;- ಸಮಾಜದ ಅತೀ ಬಡಕುಟುಂಬಗಳ ಅಸಹಾಯಕರು,ಮುದುಕರು,ಅಂಗವಿಕಲರು ಮುಂತಾದವರಿಗೆ ಸರ್ಕಾರ ಒದಗಿಸುವ ರಕ್ಷಣೆಗೆ ಸಾಮಾಜಿಕ ಭದ್ರತೆ ಎನ್ನುವರು.






1) ಅನಾಥ ಮುದುಕರಿಗೆ ಸಂಧ್ಯಾ ಸುರಕ್ಷಾ ಯೋಜನೆ

2) ಅಶಕ್ತರಿಗೆ ಅಶಕ್ತ ಮಾಸಾಶನ .

3) ಬಡ ವಿಧವೆಯರಿಗೆ ವಿಧವಾ ಮಾಶಾಸನ ನಿಡಲಾಗುತ್ತಿದೆ.



NATIONAL RURAL HEALTH MISSION
राष्ट्रीय ग्रामीण स्वास्थ्य मिशन
(2005-2012)